## ಪ್ರಾರ್ಥನೆ

### ವೇದಮಂತ್ರಗಳಿಂದ

ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್।
ಸ ದಧಾರ ಪೃಥ್ವೀಂ ದ್ಯಾಮುತೇಮಾಂ ಕಸ್ಮೈ ದೇವಾಯ
ಹವಿಷಾ ವಿಧೇಮ ॥

'ಹಿರಣ್ಯಗರ್ಭ' ಎಂಬ ಸಂಜ್ಞೆಯಿಂದ ಪ್ರಸಿದ್ಧವಾದ ಪ್ರಜಾಪತಿಯು ಜಗತ್ತಿನ ಸೃಷ್ಟಿಗೆ ಮೊದಲು ತಾನೊಬ್ಬನೇ ಅದ್ವಿತೀಯನಾಗಿದ್ದನು. ಅನಂತರ, ತನ್ನಿಂದಲೇ ಸೃಷ್ಟಿಯಾದ ಸಕಲ ಜಗತ್ತಿಗೂ ತಾನೊಬ್ಬನೇ ಪಾಲಕನೂ ಪ್ರಭುವೂ ಆದನು. ಅವನು ವಿಸ್ತಾರವಾದ ಸ್ವರ್ಗಲೋಕವನ್ನೂ, ಭೂಮಿ ಮತ್ತು ಅಂತರಿಕ್ಷಗಳನ್ನೂ, ತನ್ನ ಸಾಮರ್ಥ್ಯದಿಂದ ಧರಿಸಿದ್ದಾನೆ. ದೇವತಾತ್ಮನಾದ ಈ ಪ್ರಜಾಪತಿಗೆ ನಾವು ನಮ್ಮ ಪ್ರಾರ್ಥನೆಗಳನ್ನು ಸಲ್ಲಿಸೋಣ.

ಯ ಆತ್ಮದಾ ಬಲದಾ ಯಸ್ಯ ವಿಶ್ವ ಉಪಾಸತೇ ಪ್ರಶಿಷಂ ಯಸ್ಯ ದೇವಾಃ।
ಯಸ್ಯ ಛಾಯಾಮೃತಂ ಯಸ್ಯ ಮೃತ್ಯುಃ ಕಸ್ಮೈ ದೇವಾಯ
ಹವಿಷಾ ವಿಧೇಮ ॥

ಪ್ರಜಾಪತಿಯು ಸಕಲ ಜಗತ್ತಿಗೂ ಶಕ್ತಿಯನ್ನೂ ಚೈತನ್ಯವನ್ನೂ ಕೊಡುತ್ತಾನೆ. ಅವನ ಉತ್ಕೃಷ್ಟ ಶಾಸನವನ್ನು ಎಲ್ಲ ದೇವತೆಗಳೂ ಉಳಿದೆಲ್ಲ ಜಗತ್ತೂ ಪಾಲಿಸುತ್ತವೆ. ಅವನಿಗೆ ಮೃತ್ಯು ಮತ್ತು ಅಮೃತತ್ವಗಳು ಎರಡು ನೆರಳುಗಳಂತೆ ಇರುವವು. ಅಂತಹ ದೇವತಾತ್ಮನಾದ ಪ್ರಜಾಪತಿಗೆ ನಾವು ನಮ್ಮ ಪ್ರಾರ್ಥನೆಗಳನ್ನು ಸಲ್ಲಿಸೋಣ.

ಯಸ್ಯೇಮೇ ಹಿಮವಂತೋ ಮಹಿತ್ವಾ ಯಸ್ಯ
ಸಮುದ್ರಂ ರಸಯಾ ಸಹಾಹುಃ ।
ಯಸ್ಯೇಮಾಃ ಪ್ರದಿಶೋ ಯಸ್ಯ ಬಾಹೂ
ಕಸ್ಮೈ ದೇವಾಯ ಹವಿಷಾ ವಿಧೇಮ ॥

ಹಿಮಾಲಯವೇ ಮೊದಲಾದ ಸಕಲ ಪರ್ವತಗಳು, ಸಕಲ ನದಿಗಳಿಂದ ಕೂಡಿದ ಎಲ್ಲಾ ಸಮುದ್ರಗಳು, ಪ್ರಜಾಪತಿಯ ಪ್ರಭಾವದಿಂದಲೆ ನಿರ್ಮಾಣಗೊಂಡವು. ಅದಲ್ಲದೆ, ಎಲ್ಲ ದಿಕ್ಕುಗಳೂ ಅವನ ಭುಜಗಳೇ ಆಗಿವೆ. ಅಂತಹ ದೇವತಾತ್ಮನಾದ ಪ್ರಜಾಪತಿಗೆ ನಾವು ನಮ್ಮ ಪ್ರಾರ್ಥನೆಗಳನ್ನು ಸಲ್ಲಿಸೋಣ.
(ಋಗ್ವೇದ, ೧೦: ೧೨೧: ೧, ೨, ೪)

ನಮಃ ಶಂಭವಾಯ ಚ ಮಯೋಭವಾಯ ಚ। ನಮಃ ಶಂಕರಾಯ ಚ ಮಯಸ್ಕರಾಯ ಚ। ನಮಃ ಶಿವಾಯ ಚ ಶಿವತರಾಯ ಚ ॥

ನಮಃ ಪಾರ್ಯಾಯ ಚಾವಾರ್ಯಾಯ ಚ । ನಮಃ ಪ್ರತರಣಾಯ ಚೋತ್ತರಣಾಯ ಚ ॥ ನಮಸ್ತೀರ್ಥ್ಯಾಯ ಚ ಕೂಲ್ಯಾಯ ಚ ।
ನಮಃ ಶಷ್ಪ್ಯಾಯ ಚ ಫೇನ್ಯಾಯ ಚ ॥
(ಶುಕ್ಲ ಯಜುರ್ವೇದ ಸಂಹಿತಾ, ೧೬: ೪೧, ೪೨)

ನಮಗೆ ಸಂತೋಷವನ್ನೂ ಕಲ್ಯಾಣವನ್ನೂ ತಂದುಕೊಡುವ ದೇವನೇ, ನಮಗೆ ಒಳ್ಳೆಯದನ್ನೂ ಮಂಗಳವನ್ನೂ ಉಂಟುಮಾಡುವ ದೇವನೇ, ನಮಗೆ ಪರಮಾನಂದವನ್ನು ಕೊಡುವ ದೇವನೇ, ನಿನಗೆ ಮತ್ತೆ ಮತ್ತೆ ನಮಸ್ಕಾರಗಳು. ನೀನು ಪ್ರಪಂಚವನ್ನು ಮೀರಿ ಇದ್ದೀಯೆ. ಅದರ ಮಧ್ಯದಲ್ಲೂ ಇದ್ದೀಯೆ. ನಿನ್ನ ಪವಿತ್ರ ನಾಮೋಚ್ಚಾರಣೆಯಿಂದ ಪಾಪಗಳನ್ನು ದಾಟುವಂತೆ ಮಾಡುತ್ತೀಯೆ. ಜ್ಞಾನದಿಂದ ಸಂಸಾರಸಾಗರವನ್ನು ದಾಟಿಸುತ್ತೀಯೆ, ಪವಿತ್ರ ಸರಸ್ಸುಗಳಲ್ಲಿ, ದಡಗಳಲ್ಲಿ ಇದ್ದೀಯೆ. ಎಳೆಯ ಹುಲ್ಲಿನಲ್ಲಿ, ಕಡಲ ದಡದಲ್ಲಿ ಮತ್ತು ನೊರೆಯುಕ್ಕುವ ಅಲೆಗಳಲ್ಲಿ ಇದ್ದೀಯೆ. ನಿನಗೆ ಮತ್ತೆ ಮತ್ತೆ ನಮಸ್ಕಾರಗಳು.

## ಸೂಕ್ತಿಪ್ರಭ

### ಸತ್ಯನಿಷ್ಠೆ

ತಾನು ಬಹಳ ಬುದ್ಧಿವಂತನೆಂದು ತಿಳಿದುಕೊಳ್ಳುವುದು ಮೂರ್ಖತನ. ಕಾಗೆ ಒಂದು ದೃಷ್ಟಿಯಿಂದ ಬಹಳ ಚುರುಕು. ಅದೂ ಕೂಡ ಹಾಗೇ ತಿಳಿದುಕೊಳ್ಳುವುದು. ಆದರೂ ಕೂಡ ಅದು ಹೇಸಿಗೆಯ ಮೇಲೆ ಜೀವಿಸಬೇಕಾಗಿದೆ. ಇದರಂತೆಯೇ ಸುಳ್ಳು ಹೇಳುವವನು ಕೂಡ ಯಾವುದನ್ನು ಪ್ರಾಪಂಚಿಕ ಬುದ್ಧಿವಂತಿಕೆಯೆಂದು ತಿಳಿದುಕೊಂಡಿರುವನೋ, ಅದು ಕೇವಲ ಹೀನ ಉಪಾಯಕ್ಕಿಂತ ಮೇಲಲ್ಲ. ಇದರಿಂದ ಆತನು ಆತ್ಮನಾಶವನ್ನು ತಂದುಕೊಳ್ಳುವನು. *–ಶ್ರೀರಾಮಕೃಷ್ಣ*

ನಿಜವಾದ ತಪಸ್ಸೆಂಬುದು ಮೂರು ನಿಯಮಗಳ ಮೇಲೆ ಆಧಾರಿತವಾಗಿದೆ: ಮೊದಲು ಸತ್ಯದಲ್ಲಿ ಶರಣುಹೊಂದು. ಯಾವುದೇ ಕಾರ್ಯವನ್ನು ಮಾಡುವಾಗಲೂ ಸತ್ಯವೇ ನಮ್ಮ ಆಧಾರಸ್ತಂಭವಾಗಬೇಕು. ಎರಡನೆಯದು ಕಾಮವನ್ನು ಜಯಿಸು. ಮೂರನೆಯದು ಎಲ್ಲ ಬಗೆಯ ಹಾತೊರೆಯುವಿಕೆಯನ್ನು ತ್ಯಜಿಸು. *–ಸ್ವಾಮಿ ಬ್ರಹ್ಮಾನಂದ*

ಒಬ್ಬನು ಹೇಗಾದರೂ ಮಾಡಿ ಭಗವಂತನನ್ನು ತನ್ನ ಹೃದಯದಲ್ಲಿ ಪ್ರತಿಷ್ಠಾಪಿಸಿಕೊಳ್ಳಬೇಕು. ಆಗ ನೈತಿಕ ಚಾರಿತ್ರ್ಯವನ್ನು ಬೆಳೆಸಿಕೊಳ್ಳಲು ಪ್ರತ್ಯೇಕ ಯತ್ನವನ್ನೇನೂ ಮಾಡಬೇಕಾಗಿಲ್ಲ. ಸತ್ಯ, ದಯೆ, ಪ್ರೀತಿ ಮುಂತಾದ ಎಲ್ಲ ದಿವ್ಯ ಗುಣಗಳೂ ತಾವಾಗಿಯೇ ಬಂದು ಸೇರುವವು.
*– ಸ್ವಾಮಿ ಶಿವಾನಂದ*

ಎಲ್ಲ ಪರಿಸ್ಥಿತಿಯಲ್ಲಿಯೂ ಸತ್ಯನಿಷ್ಠನಾಗಿರು. 'ಸತ್ಯವೇ ಜಯಿಸುವುದು. ಸುಳ್ಳಲ್ಲ.' ನೀನು ಯಾರೊಂದಿಗೂ ದ್ವೇಷವನ್ನು ಇಟ್ಟುಕೊಳ್ಳದೆ ಸತ್ಯವನ್ನೇ ಹಿಡಿದುಕೊಂಡಿದ್ದರೆ, ಶ್ರೀರಾಮಕೃಷ್ಣರು ಮಾನವಜನಾಂಗಕ್ಕೆ ಸೇವೆ ಸಲ್ಲಿಸಲು ಬೇಕಾದ ಅನಂತ ಶಕ್ತಿಯನ್ನು ನಿನಗೆ ದಯಪಾಲಿಸುವರು.
*– ಸ್ವಾಮಿ ಪ್ರೇಮಾನಂದ*

ಸತ್ಯನಿಷ್ಠನಾಗಿರುವುದು ಅತ್ಯಂತ ಕಠಿಣ. ಅದಕ್ಕಾಗಿ ಬಹಳಷ್ಟು ತ್ಯಾಗ ಮಾಡಬೇಕಾಗುತ್ತದೆ. 'ನಾನಿದನ್ನು ಹೇಳುವುದಿಲ್ಲ' ಎಂದು ರಹಸ್ಯವಾಗಿಟ್ಟುಕೊಳ್ಳುವುದೂ ಅಸತ್ಯವೇ. ನಮ್ಮ ವ್ಯವಹಾರಗಳಲ್ಲಿ ಸಂಪೂರ್ಣ ಮುಕ್ತನಾಗಿರುವುದು ಮತ್ತು ನೇರವಾಗಿರುವುದೇ ನೈಜ ಸತ್ಯನಿಷ್ಠೆ.
*– ಸ್ವಾಮಿ ತುರೀಯಾನಂದ*

ಸತ್ಯವೆಂಬುದು ಎಂತಹ ಪರಿಪೂರ್ಣ ಸ್ಥಿತಿಯೆಂದರೆ, ಪರಮಾತ್ಮನು ಮಾನವರಿಗೆ ಕಾಣಿಸಿಕೊಂಡರೆ, ಅವನು ತನ್ನ ದೇಹಕ್ಕಾಗಿ ಬೆಳಕನ್ನು ಆರಿಸಿಕೊಳ್ಳುತ್ತಾನೆ; ತನ್ನ ಆತ್ಮಕ್ಕಾಗಿ ಸತ್ಯವನ್ನೇ ಆರಿಸಿಕೊಳ್ಳುತ್ತಾನೆ.
*–ಪೈಥಾಗರಸ್*

ಸತ್ಯವೆಂಬುದು ಅನುಭವವೇದ್ಯವೇ ಹೊರತು ಕೇವಲ ಊಹೆಯ ವಿಷಯವಲ್ಲ. ಇದನ್ನು ಒಬ್ಬ ಪ್ರಾಮಾಣಿಕ ಮನುಷ್ಯ ಸಾಧಾರಣವಾಗಿ ಕಂಡುಕೊಳ್ಳುತ್ತಾನೆ. ಸತ್ಯವನ್ನು ಅರಿಯಲು, ಅದನ್ನು ಪರಿಭಾವಿಸಬೇಕು. ಎಲ್ಲಕ್ಕಿಂತ ಮಿಗಿಲಾಗಿ, ಅದರಂತೆ ಬಾಳಬೇಕು. ಆಗ ಮಾತ್ರ ಅದು ಒಬ್ಬನ ವ್ಯಕ್ತಿತ್ವದ ಮತ್ತು ಜೀವನದ ಪ್ರಮುಖ ಅಂಗವಾಗುತ್ತದೆ.
*–ಡಬ್ಲ್ಯು. ಟರ್ನ್‌ಬುಲ್*

ಇಡೀ ವಿಶ್ವವೇ ಒಂದು ವೇಳೆ ಸತ್ಯದ ವಿರುದ್ಧ ತಿರುಗಿಬಿದ್ದರೆ, ಆಗ ನಾನು ವಿಶ್ವದ ವಿರುದ್ಧವೇ ತಿರುಗಿ ಬೀಳುತ್ತೇನೆ. *–ಅಥನಾಸಿಯಸ್*